ಪೊಲೀಸರನ್ನು ಕರೆಯುತ್ತೇನೆ' ಎಂದಳು.

'ಹೌದಾ' ಎಂದು ಫೋನ್ ತೋರಿಸಿದನು. 'ಈ ಫೋನ್ ತಗೋ. ಟಿ.ವಿ. ಚಾನಲ್ಸ್‌ಗೂ ಫೋನ್ ಮಾಡು. ನಿನ್ನ ಗಂಡನ ಗಂಡಸುತನದ ಬಗ್ಗೆ, ಡಾಕ್ಟರ್ ಹೇಳಿದ ಅಬಾರ್ಷನ್ ಬಗ್ಗೆ ಅವರಿಗೂ ತಿಳಿಯಲಿ'

ಷಾಕ್ ಆಯಿತು. ಕೆಳಗೆ ಬೀಳದ ಹಾಗೆ ಕುರ್ಚಿಯ ಅಂಚನ್ನು ಹಿಡಿದು ಸಾವರಿಸಿಕೊಂಡಳು ಕಲ್ಯಾಣಿ.

'ಈ ರಿಕಾರ್ಡಿಂಗ್ ಬಯಲು ಮಾಡಿದರೆ ನಿನ್ನ ಸಂಸಾರವೇ ಅಬಾರ್ಷನ್ ಆಗುತ್ತದೆ' ಎಂದು ಸುಳ್ಳು ಹೇಳಿದನು. ನಿಜಕ್ಕೂ ಆ ಟೇಪ್‌ನಲ್ಲಿ ಕೃಷ್ಣನ ಗಂಡಸುತನದ ಬಗ್ಗೆ ಇರಲಿಲ್ಲ. ಕೇವಲ ಡಾಕ್ಟರ್ ಆಡಿದ್ದ ಮಾತುಗಳು ರೆಕಾರ್ಡ್ ಆಗಿದ್ದವು. ಆದರೆ ವಿಷಯ ಹೇಳಿ ಬೆದರಿಸಿದ ಕೂಡಲೆ ಎದುರಿನ ವ್ಯಕ್ತಿ ಹೇಗೆ ಭಯಪಡುತ್ತಾನೆ ಎನ್ನುವುದು ಪ್ರೇಮ್‌ನಂತಹ ಬ್ಲ್ಯಾಕ್ ಮೇಲರ್‌ಗಳಿಗೆ ತಿಳಿದಿರುತ್ತದೆ.

ಅವನು ಅಂದುಕೊಂಡ ಹಾಗೇ ಆಯಿತು. ಕಲ್ಯಾಣಿ ಕೈಜೋಡಿಸಿ 'ನಿನಗೆ ಕೈ ಮುಗೀತೀನಿ, ಪ್ಲೀಸ್... ನನ್ನನ್ನು ಬಿಟ್ಟುಬಿಡು' ಎಂದು ಬೇಡಿಕೊಂಡಳು.

ಪ್ರೇಮ್ ಮಂಚದಿಂದಿಳಿದು ಅವಳ ಬಳಿಗೆ ಬಂದನು. ಹೆದರಿದ ಜಿಂಕೆಯಂತೆ ನೋಡುತ್ತಿದ್ದ ಅವಳು ಹಿಂದಕ್ಕೆ ಹೆಜ್ಜೆ ಹಾಕಿದ ಹಾಗೆಲ್ಲ ಅವಳ ಹತ್ತಿರ ಬರಲಾರಂಭಿಸಿದನು. ಬೆನ್ನಿಗೆ ಗೋಡೆ ತಗುಲಿ ಅವಳು ನಿಂತುಬಿಟ್ಟಳು. ಅವಳು ಅಲುಗಾಡದ ಹಾಗೆ ಎರಡೂ ಕಡೆ ಗೋಡೆಗೆ ಕೈ ಊರಿ, ಸಣ್ಣ ಸ್ವರದಲ್ಲಿ, ಆದರೆ ಕಠಿಣವಾಗಿ ಹೇಳಿದನು.

'ನೋಡು ಕಲ್ಯಾಣೀ! ನನಗೆ ಮದುವೆಯಾದ ಹೆಂಗಸರೆಂದರೆ ಇಷ್ಟ. ಅದರಲ್ಲೂ ಸೀರೆ ಕಟ್ಟಿಕೊಂಡು, ಮುಖಕ್ಕೆ ಅರಿಷಿಣ ಬಳಿದುಕೊಂಡು, ಬೆಳಿಗ್ಗೆ ತುಳಸಿ ಪೂಜೆ ಮಾಡುವ ಹೆಂಗಸರೆಂದರೆ ಇನ್ನೂ ಇಷ್ಟ. ಒಂದು ಸಾರಿ ಒಪ್ಪಿಕೋ, ಮತ್ತೆ ನಿನ್ನ ತಂಟೆಗೆ ಬರುವುದಿಲ್ಲ. ಅಷ್ಟೇ ಅಲ್ಲ, ನಿನ್ನ ಅಬಾರ್ಷನ್‌ಗೆ ಸಹಾಯ ಕೂಡ ಮಾಡ್ತೇನೆ' ಎಂದು ಇನ್ನಷ್ಟು ಹತ್ತಿರ ಬಂದನು. ಅವಳ ಎದೆ ಅಂಚುಗಳು ಅವನಿಗೆ ತಗುಲಿತ್ತಿದ್ದವು.

ಅವನನ್ನು ದೂರ ತಳ್ಳಲು ಪ್ರಯತ್ನಿಸಿದಳು, ಬೇಡಿಕೊಂಡಳು.

'ಏನೇ, ನಿನ್ನ ಬಾಯ್ ಫ್ರೆಂಡ್‌ನಷ್ಟು ಚೆನ್ನಾಗಿಲ್ಲವೇನು ನಾನು?' ಎಂದು ಗಟ್ಟಿಯಾಗಿ ಅವಳ ಭುಜವನ್ನು ಹಿಡಿದು ಅವಳ ಮುಖದ ಕಡೆ ಬಾಗಿದನು.

ಅಷ್ಟರಲ್ಲಿ ಕಾಲಿಂಗ್ ಬೆಲ್ ಸದ್ದು ಕೇಳಿಸಿತು. ಕಲ್ಯಾಣಿ ತರಗೆಲೆಯಂತೆ ಕಂಪಿಸಿದಳು.

ಪ್ರೇಮ್ ಹೆದರಲಿಲ್ಲ. ಇಂತಹ ವಿಷಯಗಳಲ್ಲಿ ಅನುಭವ ಇರುವವನಂತೆ ಕೂಲ್ ಆಗಿ 'ಹೋಗು, ಯಾರು ಬಂದಿದ್ದಾರೋ ನೋಡು' ಎಂದನು. ಆದರೆ ಅವಳು ಈ ಲೋಕದಲ್ಲೇ ಇರಲಿಲ್ಲ. ಏನೂ ತೋಚದ ಶಿಲೆಯಂತೆ ನಿಂತಿದ್ದಳು. ಮತ್ತೆ ಕಾಲಿಂಗ್ ಬೆಲ್ ಸದ್ದಾಯಿತು.

ಅವನು ಅವಳನ್ನು ಮುಂದಕ್ಕೆ ತಳ್ಳಿ 'ಹೋಗಿ ಬಾಗಿಲು ತೆಗೆ' ಎಂದನು.

ಆಗಲೇ ಎಚ್ಚರಗೊಂಡಂತೆ ಅವಳು ನಿಧಾನವಾಗಿ ಹೆಜ್ಜೆ ಹಾಕಿದಳು. ಅವನು ಅಡಿಗೆ ಮನೆಯ ಕಡೆ ಹೋಗಿ ಹೊರಗೆ ಹೋಗಲು ದಾರಿ ಇದೆಯೇ ಎಂದು ನೋಡಿದನು. ಹಿತ್ತಲಿನ ಬಾಗಿಲಿಗೆ ಹೊರಗಿನಿಂ ಚಿಲಕ ಹಾಕಲಾಗಿತ್ತು. ಮತ್ತೆ ಬೆಡ್‌ರೂಂನೊಳಗೆ ಬಂದನು.

ಕಲ್ಯಾಣಿ ಹೋಗಿ ಬಾಗಿಲು ತೆರೆದಳು.

'ಹಾಯ್ ಡಾರ್ಲಿಂಗ್, ಏನು ಕತ್ತಲಾಗದಿದ್ದರೂ ಹೂವಿನಂತೆ ತಯಾರಾಗಿದ್ದೀಯಾ.' ಎನ್ನುತ್ತ ಕೃಷ್ಣ ಒಳಗೆ ಬಂದನು. ಅವಳು ಬೆಡ್‌ರೂಂ ಕಡೆಗೆ ನೋಡಿದಳು.

'ಈವತ್ತು ಜಿಮ್‌ನಲ್ಲಿ ಬಹಳ ಹೊತ್ತು ಕಳೆದೆ, ಅದಕ್ಕೇ ಬಹಳ ಬೆವೆತಿದ್ದೇನೆ. ಮೊದಲು ಸ್ನಾನ ಮಾಡಬೇಕು...' ಎಂದು ಷರ್ಟ್ ಬಿಚ್ಚಿ, ಬೆಡ್‌ರೂಂಗೆ ಹೋಗಿ ಕುರ್ಚಿಯಲ್ಲಿ ಕುಳಿತು ನಿಧಾನವಾಗಿ ಷೂ ಬಿಚ್ಚಲಾರಂಭಿಸಿದನು.

ಕಲ್ಯಾಣಿಯ ಹೆದರಿಕೆ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿತ್ತು. ಮೊದಲು ಪ್ರೇಮ್‌ನನ್ನು ಕಂಡಾಗ, ನಂತರ ಕಾಲಿಂಗ್ ಬೆಲ್ ಸದ್ದು ಕೇಳಿದಾಗ, ಆನಂತರ ಕೃಷ್ಣ ಬಂದಾಗ!

ಬಿಚ್ಚಿದ ಷೂಗಳನ್ನು ಮಂಚದ ಕೆಳಗೆ ತಳ್ಳುವ ಸಲುವಾಗಿ ಕೆಳಗೆ ಬಾಗಿದ ಕೃಷ್ಣ ಮಂಚದ ಕೆಳಗೆ ನೋಡಿ, ನಂತರ ನಿಧಾನವಾಗಿ ತಲೆ ಎತ್ತಿ ಅವಳ ಕಡೆ ಅದೊಂದು ರೀತಿಯಲ್ಲಿ ನೋಡಲಾರಂಭಿಸಿದನು.

***

ಸಂಜೆ ಆರರ ಹೊತ್ತಿಗೆ ಚೀಫ್‌ಗೆ ಫೋನ್ ಬಂದಿತು, ನಗರದ ಅಂಚಿನಲ್ಲಿ ಒಬ್ಬ ವೃದ್ಧನ ಶವ ಸಿಕ್ಕಿದೆ, ಅದು ಗಫಾರ್‌ಖಾನ್‌ದಿರಬಹುದು ಎಂಬ ಅನುಮಾನವಿದೆ ಎಂದು!

'ಕಲ್ಯಾಣಿಯನ್ನು ತಕ್ಷಣ ಸ್ಪಾಟ್‌ಗೆ ಕರೆದುಕೊಂಡು ಬಾ' ಎಂದು ಚೀಫ್ ಕೃಷ್ಣನಿಗೆ ಫೋನ್ ಮಾಡಿ ತಿಳಿಸಿದರು. ಕೃಷ್ಣ ಮಂಚದ ಕೆಳಗೆ ನೋಡುತ್ತಿದ್ದ ಸಮಯದಲ್ಲಿ ಈ ಕಾಲ್ ಬಂದಿತು. ಮಾತನಾಡಿ ಸೆಲ್ ಆಫ್ ಮಾಡಿ 'ಬಿಚ್ಚಿದ ಬಟ್ಟೆಗಳನ್ನು ಮಂಚದ ಕೆಳಗೆ ಹಾಕಬೇಡ ಅಂತ ಎಷ್ಟು ಸಲ ಹೇಳಬೇಕು?' ಎಂದನು.

ಏನು ಹಾಕಿದೆ ಎಂದು ಬಾಗಿ ನೋಡಿದಳು ಮುಖ ನಾಚಿಕೆಯಿಂದ ಕೆಂಪಾಯಿತು. ಮಂಚದ ಕೆಳಗೆ ಅವಳ ಬ್ರಾ ಬಿದ್ದಿತ್ತು.

ಅವಳು ಏನೋ ಹೇಳುವಷ್ಟರಲ್ಲಿ 'ನಾವೀಗ ಅರ್ಜೆಂಟಾಗಿ ಹೋಗಬೇಕು. ಹೊರಡು ಈಗಲೇ' ಎಂದು ಬಿಚ್ಚಿದ ಷೂಗಳನ್ನು ಅವಸರದಿಂದ ಮತ್ತೆ ತೊಟ್ಟನು.

'ಎಲ್ಲಿಗೆ?' ಕೇಳಿದಳು ಕಲ್ಯಾಣಿ.

'ಅಲ್ಲಿಗೆ ಹೋದ ಮೇಲೆ ತಿಳಿಸುತ್ತೇನೆ' ಎಂದು ಅವಳನ್ನು ಅಲ್ಲಿಗೆ ಕರೆದೊಯ್ದನು. ಅದೃಷ್ಟವಶಾತ್ ಅದು ಅನಾಮಧೇಯ ಶವ. ವಿಷಯ ಅರ್ಥವಾಗಿ ನೆಮ್ಮದಿಯಿಂದ ನಿಡುಸುಯ್ದಳು.

'ನಾವು ಯಾವ ಕೆಲಸದ ಮೇಲೆ ಹೋಗುತ್ತಿದ್ದೇವೆ ಅಂತ ಮೊದಲೇ ಏಕೆ ಹೇಳಲಿಲ್ಲ?' ವಾಪಸ್ಸು ಬರುತ್ತಿದ್ದಾಗ ಕೇಳಿದಳು.

'ಹೇಳಿದ್ದರೆ ಮೂರ್ಛೆ ಹೋಗಿರುತ್ತಿದ್ದೆ... ಅದಕ್ಕೆ'

'ಅಷ್ಟು ಬಲಹೀನ ಮನುಷ್ಯಳು ಅಂದುಕೊಂಡೆಯಾ? ನನ್ನ ಧೈರ್ಯದ ವಿಷಯ ನಿನಗೇನು ಗೊತ್ತು?'

'ಧೈರ್ಯದ ಬಗ್ಗೆ ಗೊತ್ತಿಲ್ಲ, ನಿನ್ನ ತಂದೆ ಮೇಲೆ ನಿನಗೆಷ್ಟು ಪ್ರೀತಿ ಇದೆ ಅನ್ನುವುದು ಗೊತ್ತು' ಎಂದನು.

ಅವನ ಮಾತಿನ ಅರ್ಥ ತಿಳಿದು 'ಥ್ಯಾಂಕ್ಸ್' ಎಂದಳು ಮನಸ್ಫೂರ್ತಿಯಾಗಿ.

ಅವರು ಮನೆಗೆ ಬಂದಾಗ ಬಾಗಿಲು ತೆರೆದೇ ಇತ್ತು. 'ಅದೇನು? ಬೀಗ ಹಾಕಲಿಲ್ಲವಾ?' ಎಂದು ಕೇಳಿದನು ಆಶ್ಚರ್ಯದಿಂದ.

'ಇಲ್ಲ ಮರೆತೇಬಿಟ್ಟೆ' ಎಂದಳು.

'ಆಗ ನಿಮ್ಮ ತಂದೆ ವಿಷಯ ಹೇಳಿರಲಿಲ್ಲ ಆದರೂ ಅಷ್ಟು ಗಾಬರಿ ಏಕಾಯ್ತು?'

'ಇಲಿಗಳು ಹೊರಗೆ ಹೋಗಲಿ ಅಂತ ಎಂದು ಬಾಗಿಲು ಚಿಲಕ ಹಾಕಿರಲಿಲ್ಲ, ಸರೀನಾ?' ಎಂದಳು.

ಅವಳ ಕಡೆ ವಿಚಿತ್ರವಾಗಿ ನೋಡುತ್ತ 'ನೀನು ಅಥವಾ ನಾನು ಹುಚ್ಚಾಸ್ಪತ್ರೆಗೆ ಸೇರಬೇಕು' ಎಂದನು.

***

ಏಳಾಯಿತು. ಕೃಷ್ಣ ಬ್ರೀಫ್‌ಕೇಸ್ ಹಿಡಿದು ಹೊರಗೆ ಬರುತ್ತಾ 'ಮುಂಬೈ ಫ್ಲೈಟ್‌ಗೆ ಒಂಭತ್ತು ಗಂಟೆಗೆ.... ನಾನು ಹೋಗ್ತಿದ್ದೇನೆ, ನಿನಗೇನಾದರೂ ಬೇಕಾದರೆ ಪ್ರೇಮ್‌ನ ಕೇಳು, ಓಕೆ? ಎಂದನು.

ಇಬ್ಬರೂ ಹೊರಗೆ ಬಂದರು. ಮನೆಯ ಮುಂದಿನ ಪೋರ್ಟಿಕೋದಲ್ಲಿ ಪ್ರೇಮ್ ಬೈಕ್ ಹತ್ತಿ ಕುಳಿತಿದ್ದನು.

'ಅವನು ಆಕಡೆ ಹೊರಟಿದ್ದಾನಂತೆ. ಟ್ಯಾಕ್ಸಿ ಸ್ಟ್ಯಾಂಡ್ ಹತ್ತಿರ ಡ್ರಾಪ್ ಮಾಡ್ತಾನೆ' ಎಂದನು ಕೃಷ್ಣ. ಕೃಷ್ಣನಿಗೆ ಕಾಣದ ಹಾಗೆ ಪ್ರೇಮ್ ಅವಳ ಕಡೆ ನೋಡಿ ಮಾರ್ಮಿಕವಾಗಿ ನಕ್ಕನು. ಅವಳು ಮುಖ ಸಿಂಡರಿಸಿದಳು. ಅವರು ಹೊರಟಿದ್ದಾಗ ಕೋಣೆಯಿಂದ ಫೋನ್ ಸದ್ದು ಕೇಳಿಸಿತು. 'ರೂಂನಲ್ಲಿ ನಿನ್ನ ಫೋನ್ ಮರೆತ ಹಾಗಿದೆ. ಹೋಗಿ ತರುತ್ತೀಯಾ?' ಕೃಷ್ಣ ಅವನನ್ನು ಕೇಳಿದನು.

'ಪರವಾಗಿಲ್ಲ ಟ್ಯಾಕ್ಸಿ ಸ್ಟ್ಯಾಂಡ್ ಹತ್ತಿರವೇ ಇದೆ. ಬಂದ ಮೇಲೆ ನೋಡ್ತೀನಿ' ಎಂದು ಬೈಕ್ ಸ್ಟಾರ್ಟ್ ಮಾಡಿದನು ಪ್ರೇಮ್. ಸ್ವಲ್ಪ ದೂರ ಹೋದ ಮೇಲೆ ಬೈಕ್ ನಿಲ್ಲಿಸಿ 'ಅಯ್ಯೋ, ಈಗ ನೆನಪಾಯ್ತು, ನಮ್ಮಪ್ಪನ ವರ್ಷಾಬ್ದಿಕದ ಬಗ್ಗೆ ಅಮ್ಮ ಫೋನ್ ಮಾಡಿದಳೇನೋ... ನಾನು ಹೋಗಬೇಕು' ಎಂದನು ಪ್ರೇಮ್.

ಅದಕ್ಕೇನು ಹೋಗು,ಟ್ಯಾಕ್ಸಿ ಸ್ಟ್ಯಾಂಡ್‌ಗೆ ಆಟೋದಲ್ಲಿ ಹೋಗ್ತೀನಿ ಬಿಡು' ಎಂದು ಕೃಷ್ಣ ಬೈಕ್‌ನಿಂದಿಳಿದು ಹೊರಟು ಹೋದನು.

ಬೈಕ್ ಅನ್ನು ಹಿಂದಕ್ಕೆ ತಿರುಗಿಸಿ ಪ್ರೇಮ್ ರೂಂಗೆ ಬಂದನು. ಅವನು ಅಂದುಕೊಂಡ ಹಾಗೇ ಆಗಿತ್ತು. ಕೋಣೆಯಲ್ಲಿ ಫೋನ್‌ಗಾಗಿ ಹುಡುಕುತ್ತಿದ್ದಳು ಕಲ್ಯಾಣಿ.

**(ಸಶೇಷ)**